ದಿನಾಂಕ 27-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಅನುಮತಿಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆ ಸ.ಸ. ಅ ರವರಿಂದ:**

1. 2 ಚಿಲಕದ ದಂಡ & 2 ಚಿಲದ ಕೊಂಡಿ & ತಿವಿದ ಕೀಲಿ ಪತ್ತವನ್ನು ನನಗೆ ತೋರಿಸಿದ್ದರು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ. ಗಳನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು:: ಮಾನ್ಯ ಸ.ಸ.ಅ. ರವರಿಂದ::**

ಸದರಿ ಮು. ಮಾ. ಗಳನ್ನು ಪೋಲೀಸರು ಜಪ್ತುಪಡಿಸಿಕೊಂಡಿದ್ದರು ಎಂದರೆ ಸರಿ.

**ಅನುಮತಿಯ ಮೇರೆಗೆ ಪಾಟೀಸವಾಲು: ಆರೋಪಿ ಪರ ವಕೀಲರಿಂದ:**

1. ಪೋಲೀಸರು ಪಂಚನಾಮೆಗೆ ಬರುವಂತೆ ಎಷ್ಟು ದಿನ ಮುಂಚೆ ಕರೆದಿದ್ದರು ಎಂದು ನಿಖರವಾಗಿ ಹೇಳಲಾಗುವುದಿಲ್ಲ, ಆದರೆ 1-2 ದಿನಗಳ ಮುಂಚೆ ಕರೆದಿದ್ದರು. ಪಂಚನಾಮೆಗೆ ಬರುವಂತೆ ನೋಟೀಸು ಕೊಟ್ಟಿರಲಿಲ್ಲ, ಫೋನ್ ಮಾಡಿ ಕರೆದಿದ್ದರು.

2. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ.

3. ಆ ದಿನ ನಾನು 3 ಸಹಿಗಳನ್ನು ಮಾಡಿದ್ದೆ. ನಾನು ಸಹಿ ಮಾಡಿದ ಸದರಿ ಹಾಳೆಗಳಲ್ಲಿ ಕೆಲವೊಂದು ಬರವಣಿಗೆ ಬರೆದಿತ್ತು, ಕೆಲವೊಂದನ್ನು ಪೂರ್ವ ಮುದ್ರಿತವಾಗಿತ್ತು. ನಾನು ಸಹಿಗಳನ್ನು ಮೂರು ಸೆಟ್‌ಗೆ ಮಾಡಿದ್ದೆ. ಅವುಗಳಲ್ಲಿ ಏನು ಬರೆದಿತ್ತು ಎಂದು ತಿಳಿದುಕೊಂಡಿದ್ದೆ. ಅದರಲ್ಲಿ ಚೆಕ್ ಬಂದಿ ಬರೆದಿತ್ತು. ಸದರಿ ಚೆಕ್ ಬಂದಿ ಈಗ ನನಗೆ ಸರಿಯಾಗಿ ನೆನಪಿಲ್ಲ. ಸದರಿ ಹಾಳೆಗಳಲ್ಲಿ ನಕ್ಷೆ ಬಿಡಿಸಿದ್ದರು. ಸದರಿ ಪಂಚನಾಮೆಯಲ್ಲಿ ಆ ಮನೆ ಯಾರಿಗೆ ಸಂಬಂಧಿಸಿದ್ದು & ಮನೆಯ ನಂಬರನ್ನು ಬರೆದಿತ್ತು. ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. ನೀವು ಯಾವುದೇ ಪಂಚನಾಮೆಗೆ ಹೋಗಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮನೆಯನ್ನು ಅಳತೆ ಮಾಡಿಲ್ಲ, ಆದರೆ ನಾನು ಹೋಗುವುದಕ್ಕಿಂತ ಮುಂಚೆ ಅಳತೆ ಮಾಡಿದ್ದರು.

5. ನಕ್ಷೆಯಲ್ಲಿ 2 ಬೆಡ್‌ರೂಂ, 1 ದೊಡ್ಡ ಹಾಲ್, 1 ಕಿಚನ್, 1 ಸಣ್ಣ ಹಾಲ್, ಕಾಂಪೌಂಡ್ ಎಂದು ಬರೆದಿದ್ದರು. ಒಟ್ಟು 3 ರೂಮುಗಳು, 2 ಹಾಲ್‌ಗಳು ಆ ಮನೆಯಲ್ಲಿವೆ. ಸದರಿ ನಕ್ಷೆಯ ಪ್ರಕಾರ 7 ರೂಮ್ ಗಳಿವೆ ಎಂದರೆ ಮೇಲೆ ಇದೆ ಎನ್ನುತ್ತಾರೆ.

6. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಕೀಲಿಗಳನ್ನು ತೋರಿಸಿ, ಇಂತವು ಹಳೆಯ ಮನೆಗಳಲ್ಲಿರುತ್ತವೆ ಎಂದರೆ ಸರಿಯಲ್ಲ. ಸದರಿ ವಸ್ತುಗಳ ಬಳಿ ನಮ್ಮನ್ನು ನಿಲ್ಲಿಸಿ ಫೋಟೋಗಳನ್ನು ತೆಗೆದಿದ್ದರು. ನೀವು ಹೇಳಿದಂತಹ ಫೋಟೋಗಳು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ಸಾಕ್ಷಿಗೆ ಕಡತದಲ್ಲಿರುವ ನಿಪಿ-3 & 4 ನ್ನು ತೋರಿಸಿ, ಅವುಗಳಲ್ಲಿ ಮು.ಮಾ. ಗಳು ಬಿದ್ದ ಸ್ಥಳ ಇಲ್ಲ ಎಂದರೆ ಸಾಕ್ಷಿಯು ವಸ್ತುಗಳನ್ನು ನಮಗೆ ಆ ದಿನ ತೋರಿಸಿದ್ದರು ಎನ್ನುತ್ತಾರೆ.

7. ನಾನು ಈ ಪ್ರಕರಣವನ್ನು ಬಿಟ್ಟು ಬೇರೆ ಪ್ರಕರಣದಲ್ಲಿ ಸಾಕ್ಷಿದಾರನಾಗಿ ಇಲ್ಲ. ನಿಪಿ-3 & 4 ರಲ್ಲಿ ಮು. ಮಾ. ಗಳ ಫೋಟೋ ಇಲ್ಲ ಎಂದರೆ ಸರಿ.

8. ಸದರಿ ಮನೆಯ ಮುಖ್ಯದ್ವಾರ ಪೂರ್ವಕ್ಕೆ ಮುಖಮಾಡಿ ಇತ್ತು. ಆ ಮನೆಯ ಮುಂದೆ ನನ್ನನ್ನು ನಿಲ್ಲಿಸಿ ಫೋಟೋವನ್ನು ತೆಗೆದಿಲ್ಲ. ಘಟನಾ ಸ್ಥಳದಲ್ಲಿ 4-5 ಇದ್ದರು. ಅವರುಗಳು ಹೆಸರುಗಳು ಚಾಸಾ-3, 4 & ಶಿಲ್ಪ ಇರಬಹುದು, ಸರಿಯಾದ ಹೆಸರು ನೆನಪಿಲ್ಲ, ಚಾಸಾ-1 ಇದ್ದರು, ಇನ್ನಿಬ್ಬರು ಇದ್ದರು ಅವರ ಹೆಸರುಗಳು ನನಗೆ ಗೊತ್ತಿಲ್ಲ. ನೀವು ಹೇಳಿದಷ್ಟು ಜನರು ನಿಪಿ-3 & 4 ರಲ್ಲಿಲ್ಲ ಎಂದರೆ ಸಾಕ್ಷಿಯು ಅವರು ಮನೆಯ ಒಳಗಿದ್ದರು, ನಾವು ಫೋಟೋ ತೆಗೆಸಿಕೊಂಡಿದ್ದೆವು ಎನ್ನುತ್ತಾರೆ.

9. ಸದರಿ ಪತ್ತವನ್ನ ಸದರಿ ಕೊಂಡಿಗೆ ಹಾಕಲು ಬರುವುದಿಲ್ಲ ಎಂದರೆ ಸಾಕ್ಷಿಯು ಇಲ್ಲ ಹಾಕಿದ್ದರು ಎನ್ನುತ್ತಾರೆ. ನಾವು ಹೋಗುವ ಪೂರ್ವದಲ್ಲಿ ಪೋಲೀಸರು ತೆಗೆದು ಇಟ್ಟಿದ್ದರು ಎನ್ನುತ್ತಾರೆ. ಪತ್ತವನ್ನು ಜೋರಾಗಿ ಮೀಟಿ ತೆಗೆದರೆ ನಿಪಿ-6 ರಲ್ಲಿ ತೋರಿಸಿದ ಎರಡೂ ಕೊಂಡಿಗಳು ನೆಗ್ಗುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹಿಂದುಗಡೆ ಜಾಲಿ ಗೇಟಿಗೆ ಹಾಕಿದ್ದ ಪತ್ತ ಅದು, ಜೋರಾಗಿ ತಿವಿದಿದ್ದರಿಂದ ಆ ಕೊಂಡಿ ಓಪನ್ ಆಗಿ ಒಳಗಡೆ ಬಂದು ಕಳ್ಳತನ ಮಾಡಿದ್ದು ಎನ್ನುತ್ತಾರೆ. ಅಂದರೆ ಕಳ್ಳತನವಾಗುವಾಗ ನೀವು ಹಾಜರಿದ್ದಿರಾ ಎಂದರೆ ಸಾಕ್ಷಿಯು ಕೈ ಮುಗಿದು, ಇಲ್ಲ ನಾನು ಇರಲಿಲ್ಲ ಎನ್ನುತ್ತಾರೆ. ನಿಪಿ-6 ರಲ್ಲಿರುವ ಬಾಗಿಲು ಹಿಂದಿನ ಬಾಗಿಲು ಇರುತ್ತದೆ.

10. ಮುರಿದ ಚಿಲಕಕ್ಕೆ ಪತ್ತ ಹಾಕಲು ಬರುವುದಿಲ್ಲ ಎಂದರೆ ಸರಿ. ಮು.ಮಾ. ಹಾಕಿದ ಪತ್ತ ಸುಮಾರು ವರ್ಷಗಳ ಹಿಂದೆ ಹಾಕಿದ್ದ ಪತ್ತ ಎಂದರೆ ಸರಿ. ಸದರಿ ಕೊಂಡಿಗಳನ್ನು ಸ್ಕ್ರೂ ತೆಗೆದು ತೆಗೆದಿದ್ದಾರೆ, ಮೀಟಿ ತೆಗೆದಿಲ್ಲ ಎಂದರೆ ಸರಿ.

11. ನಿಮಗೆ ಪಂಚನಾಮೆಯಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ಗೊತ್ತಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ದಿ.30-12-2021 ರಂದು ಆಗಿದ್ದ ಘಟನೆ, ಆದ್ದರಿಂದ ನನಗೆ ಕೆಲವೊಂದು ನೆನಪಿಲ್ಲ ಎನ್ನುತ್ತಾರೆ. ಚಾಸಾ-1 ರವರಿಗೆ ಸಹಾಯ ಮಾಡಲು ಪೋಲೀಸರು ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಸಿಂಧನೂರು.